‘ಏನು ಹೇಳುತ್ತಿದ್ದೀರಿ?’ ಅಮ್ಮ ಪುಳಕಿತಳಾದ್ದು ಕಂಡು ಹತ್ತಿರ ಕುಳಿತ ನಮಗೂ ಬೆರಗು.

‘ಹೌದು’ ಅಪ್ಪ ಮಾತು ಮುಂದುವರಿಸಿದ. ‘ಕುಂತೀ ಮಾತೆ ಮದುವೆಗೆ ಮೊದಲೇ ನನ್ನನ್ನು ಹಡೆದು ಆ ಮೇಲೆ ಲೋಕೋಪವಾದಕ್ಕೆ ಹೆದರಿ ನದಿಯಲ್ಲಿ ತೇಲಿಬಿಟ್ಟಳಂತೆ. ನನ್ನನ್ನು ರಕ್ಷಿಸಿದ ಅಧಿರಥ, ರಾಧೆ ನನಗೆ ಸಾಕು ತಂದೆತಾಯಿಗಳಾದರು. ನಾನು ಸೂತನಾಗಿ ಬೆಳೆದೆ.’

‘ನಿಜವೆ?’

‘ಹುಂ– ಮುಂದೆ ಕೇಳು– ಕೃಷ್ಣ ಮತ್ತೇನು ಹೇಳಿದ ಗೊತ್ತೆ, ನೀನು ಮನಸ್ಸು ಮಾಡಿದರೆ ಯುದ್ಧ ನಡೆಯುವುದಿಲ್ಲ. ನೀನೇ ಹಸ್ತಿನಾಪುರ ಸಾಮ್ರಾಜ್ಯಕ್ಕೆ ಮಹಾರಾಜನಾಗುತ್ತೀಯ. ಯುದ್ಧ ನಿಲ್ಲಿಸಿದ ಕೀರ್ತಿ ನಿನ್ನದಾಗುತ್ತದೆ. ಪಾಂಡವ ಕೌರವರು ನಿನ್ನ ಆಜ್ಞಾನವರ್ತಿಗಳಾಗುತ್ತಾರೆ.’ ಅಪ್ಪನಿಗೆ ನಿಜಕ್ಕೂ ಸಂತೋಷವಾದ ಹಾಗಿತ್ತು. ಅಲ್ಲವೇ ಮತ್ತೇ– ತನ್ನದಲ್ಲದ ಈ ಸೂತತನವನ್ನು ಜೀವಮಾನವಿಡೀ ಅನುಭವಿಸಬೇಕಾಗಿದ್ದ ಗ್ರಹಚಾರದಿಂದ ಮುಕ್ತನಾಗುವ ಸಮಯ ಅದು. ಅಪ್ರತಿಮ ಸಾಹಸಿಯಾಗಿದ್ದೂ ಅಪ್ಪ ಕೀಳರಿಮೆಯಲ್ಲಿ ಬೇಯುತ್ತಿದ್ದ. ಈಗ ಅದೃಷ್ಟ ಅನ್ನುವುದು ಕೃಷ್ಣನ ರೂಪದಲ್ಲಿ ಅರಸಿಕೊಂಡು ಬಂದಿದೆ. ಇನ್ನು ಮೇಲೆ ಅಪ್ಪ ಅಧಿಕೃತವಾಗಿ ಕುರುವಂಶೀಯನಾಗುತ್ತಾನೆ. ತಾವೆಲ್ಲ ಕುರು ರಾಜಕುಮಾರರು! ಅಪ್ಪ ಗಹಗಹಿಸಿ ನಗುತ್ತಿದ್ದ ನಮ್ಮನ್ನೆಲ್ಲ ಹೆಮ್ಮೆಯಿಂದ ನೋಡಿದ್ದ. ತಮಗೆಲ್ಲ ಬೆರಗೋ ಬೆರಗು! ಅಪ್ಪ ನಿಜವಾಗಿ ಪರಿತ್ಯಕ್ತ ರಾಜಕುಮಾರನೇ?!’

‘ಹಾಗಾದರೆ ನಾನು ಹಸ್ತಿನಾಪುರದ ಮಹಾರಾಣಿ!’ ಅಮ್ಮನ ಮೈ, ಮಾತಿನಲ್ಲಿ ರೋಮಾಂಚನದ ಭಾಸ ನಮಗೆ.

ಆಗ ಮಾತ್ರ ಅಪ್ಪ ತಟ್ಟನೆ ಗಂಭೀರನಾಗಿಬಿಟ್ಟ. ಅದುವರೆಗಿನ ಅವನ ಉತ್ಸಾಹಕ್ಕೆ ಈಗ ಭಂಗ ಬಂದಹಾಗಿತ್ತು. ಕ್ಷಣಕಾಲದ ನಂತರ ಹೆಂಡತಿಯ ಮುಖ ನೋಡಿ ನಂತರ ತಲೆ ತಗ್ಗಿಸಿ ನಿಧಾನವಾಗಿ ಹೇಳಿದ. ‘ನಾನು ಕೃಷ್ಣನ ಕೋರಿಕೆಯನ್ನು ತಿರಸ್ಕರಿಸಿಬಿಟ್ಟೆ ವೃಷಾಲೀ...’

‘ಯಾಕೆ?’ ಅವಳಿಗೆ ದಿಗ್ಭ್ರಮೆ. ನಮಗೂ ದಿಕ್ಕುತೋಚದ ಕಳವಳ.

‘ಎರಡು ಕಾರಣಗಳಿಂದ.’

‘ಏನು ಅವು?’

‘ನಾನು ತೀರಾ ಅವಮಾನಕರ ಸ್ಥಿತಿಯಲ್ಲಿದ್ದಾಗ ದುರ್ಯೋಧನ ನನ್ನನ್ನು ಆದರಿಸಿದ. ಅಂಗದೇಶಕ್ಕೆ ರಾಜನನ್ನಾಗಿ ಮಾಡಿದ. ಅಂತರಂಗದ ಮಿತ್ರನನ್ನಾಗಿ ಅಂಗೀಕರಿಸಿದ. ಆಲಂಗಿಸಿದ. ಅವನಿಂದ ನನಗೆ ಸ್ಥಾನಮಾನಗಳು ದೊರೆತಿವೆ ವೃಷಾಲೀ. ಇಷ್ಟು ಮಾಡಿದ್ದಕ್ಕಾಗಿ ನಾನು ಅವನಿಗೆ ಋಣಿ ಆಗಿರಬೇಕೋ ಬೇಡವೋ. ಒಂದು ವೇಳೆ ಪಾಂಡವ ಕೌರವರ ಮಧ್ಯೆ ಯುದ್ಧ ನಡೆದರೆ ಗೆಲುವಿಗಾಗಿ ನನ್ನನ್ನೇ ಅವಲಂಬಿಸಿದ್ದಾನೆ. ನನ್ನನ್ನು ಬಿಟ್ಟರೆ ಬೇರೆ ಯಾರೂ ಅರ್ಜುನನನ್ನು ಕೊಲ್ಲಲಾರರು ಎಂದು ಗಟ್ಟಿಯಾಗಿ ನಂಬಿದ್ದಾನೆ. ನಾನು ಅವನನ್ನು ನಿರಾಸೆಗೊಳಿಸಲಾರೆ.’

‘ದುರ್ಯೋಧನನಿಗಾಗಿ ತಮ್ಮನನ್ನೇ ಕೊಲ್ಲುತ್ತೀರಾ?’

‘ವಿಧಿ ಇಲ್ಲ.’

‘ಅಲ್ಲ, ಈಗ ಕೃಷ್ಣ ತೋರಿದ ಆಮಿಷಗಳೇನು ಸಾಮಾನ್ಯದ್ದೇ?’ ಅಮ್ಮನ ಮಾತಿಗೆ ತುಸು ಆವೇಶ ಬಂದಹಾಗಿತ್ತು. ‘ಅನಾಯಾಸ ಸೂತತನ ನಿವಾರಣೆಯಾಗುತ್ತಿತ್ತು. ಕ್ಷತ್ರಿಯ ಪಟ್ಟ ಮಾತ್ರವಲ್ಲ, ಹಸ್ತಿನಾಪುರದ ಸಾಮ್ರಾಜ್ಯವೇ ಲಭಿಸುತ್ತಿತ್ತು. ಪಾಂಡವರಂತಹ ವೀರರು ನಿಮ್ಮ ಆಜ್ಞಾನವರ್ತಿಗಳಾಗಿರುತ್ತಿದ್ದರು. ಆ ಕೌರವ ಕೊಟ್ಟ ಗೌರವಕ್ಕಿಂತ ನೂರುಪಾಲು ಹೆಚ್ಚಿನದಲ್ಲವೇ ಇವೆಲ್ಲ!’